ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 43-46.
©*IIMRD*, Mysuru
IIMRD JOURNALS
www.iimrd.com

# ಕಾಡುಗೊಲ್ಲ ಸಮುದಾಯದ ಸೂತಕದ ಆಚರಣೆಗಳು

**ಸಂತೋಷ್ ಕುಮಾರ್ ಜಿ.ಕೆ.***

ಸಂಶೋಧನಾರ್ಥಿ, ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ.

**ಸಾರಾಂಶ: (Abstract)**

*ಬುಡಕಟ್ಟು ಸಮುದಾಯದಲ್ಲಿನ ಸೂತಕದ ಕಲ್ಪನೆಯು ಬಹಳ ವಿಶೇಷವಾದ ಪರಿಕಲ್ಪನೆಯಾಗಿರುವುದನ್ನು ತಿಳಿಯಬಹುದಾಗಿದೆ. ಈ ಸಮುದಾಯದಲ್ಲಿ ಸಹಜವಾಗಿ ಜನನ, ಮರಣ ಮತ್ತು ಹೆಣ್ಣು ಋತುಮತಿಯಾದ ಸಂದರ್ಭಗಳಲ್ಲಿ ಸೂತಕವನ್ನು ಆಚರಿಸಲಾಗುತ್ತದೆ. ಆ ಸಮುದಾಯದ ಯಾವುದೇ ಕುಟುಂಬದಲ್ಲಿ ಈ ಮೇಲಿನ ಯಾವುದೇ ಘಟನೆ ನಡೆದರೂ ಅದನ್ನು ಸೂತಕವೆಂದು ಕರೆಯಲಾಗುತ್ತದೆ. ಅಂತಹ ಸಂಂದರ್ಭದಲ್ಲಿ ಮನೆಯಲ್ಲಿ ಯಾವುದೇ ಶುಭಕಾರ್ಯಗಳನ್ನು ಮಾಡುವಂತಿಲ್ಲ. ಐದು–ಮೂರು ದಿನಗಳಲ್ಲಿ ಸೂತಕವನ್ನು ಕಳೆದುಕೊಂಡ ನಂತರ ಅವರ ಮನೆಯಲ್ಲಿ ಶುಭಕಾರ್ಯಗಳನ್ನು ಮಾಡಬಹುದು. ಮತ್ತು ಬೇರೆಯವರ ಮನೆಗಳಿಗೆ ಪ್ರವೇಶ ಮಾಡಬಹುದು. ಪ್ರಸ್ತುತ ಲೇಖನದಲ್ಲಿ ಕಾಡುಗೊಲ್ಲ ಸಮುದಾಯದಲ್ಲಿ ಕಂಡು ಬರುವ ಸೂತಕದ ಆಚರಣೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕಾಡುಗೊಲ್ಲ, ಸೂತಕ, ಜೀವನಾವರ್ತನ ಆಚರಣೆಗಳು, ಬುಡಕಟ್ಟು.

## ಪೀಠಿಕೆ

ಕರ್ನಾಟಕದ ಅನೇಕ ಸಮುದಾಯಗಳಲ್ಲಿ ಕಾಡುಗೊಲ್ಲ ಸಮುದಾಯವು ಕೂಡ ಒಂದಾಗಿದೆ. ತಮ್ಮದೇ ಆದಂತಹ ವಿಶಿಷ್ಟ ಸಂಸ್ಕೃತಿಯನ್ನು ಆಚರಿಸಿಕೊಂಡು ಬಂದಿರುವುದನ್ನು ತಿಳಿಯಬಹುದು. ಅದರಲ್ಲೂ ನಾಗರಿಕ ಸಮಾಜದಿಂದ ದೂರವಿದ್ದು ತಮ್ಮದೇ ಆದ ಹಟ್ಟಿಗಳನ್ನು ನಿರ್ಮಿಸಿಕೊಂಡು ಊರಿನ ಎಲ್ಲಾ ಸಮುದಾಯಗಳಿಂದ ದೂರ ಉಳಿದಿರುವುದನ್ನು ಗಮನಿಸಬಹುದು ಈ ಒಂದು ಸಮುದಾಯದಲ್ಲಿ ಜನನ, ಮರಣ, ಋತುಮತಿಯಾದಾಗ ಸೂತಕದ ಆಚರಣೆಯನ್ನು ಬಹಳ ವಿಶಿಷ್ಟವಾಗಿ ಮತ್ತು ವಿಶೇಷವಾಗಿ ಆಚರಿಸುವುದನ್ನು ತಿಳಿಯಬಹುದಾಗಿದೆ.

ಕಾಡುಗೊಲ್ಲರ ಜೀವನಾರ್ತಕ ಆಚರಣೆಗಳಲ್ಲಿ ಜನನ ಸಂಸ್ಕಾರವು ಕೂಡ ಒಂದಾಗಿದೆ. ಕಾಡುಗೊಲ್ಲ ಸಮುದಾಯದಲ್ಲಿ ಹೆರಿಗೆಯಾದ ನಂತರ ತಾಯಿ ಮತ್ತು ಮಗುವನ್ನು ಊರಿನಿಂದ ಒಂದು ಗುಡಿಸಲಿನಲ್ಲಿ ಸೂತಕವೆಂದು ಒಂದು ತಿಂಗಳಕಾಲ ಊರಿನಿಂದ ಹೊರಗಿಡುತ್ತಾರೆ. ಕಾಡುಗೊಲ್ಲ ಸಮುದಾಯದಲ್ಲಿ ಜನನವು ಮನೆಯೊಳಗಾದರೂ ತಾಯಿ ಮಗುವಿನ ಕರುಳು ಬೇರ್ಪಡುವ ಮೊದಲೇ ಅವರನ್ನು ಹಟ್ಟಿಯ

*Please cite this article as: ಸಂತೋಷ್ ಕುಮಾರ್ ಜಿ.ಕೆ* (2022). ಕಾಡುಗೊಲ್ಲ ಸಮುದಾಯದ ಸೂತಕದ ಆಚರಣೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 43–46.*

ಹೊರಗೆ ಗುಡಿಸಲು ನಿರ್ಮಿಸಿ ತಾಯಿ–ಮಗುವನ್ನು ಇರಿಸುತ್ತಾರೆ. ಈ ಸಂದರ್ಬದಲ್ಲಿ ಬಾಣಂತಿಗೆ ಹರಳೆಣ್ಣೆಯ ದೀಪದ ಜೊತೆಗೆ ಹೊಸ ಮಡಕೆಯಲ್ಲಿ ನೀರು ಒದಗಿಸುತ್ತಾರೆ. ಬಾಣಂತಿಯ ಸಹಾಯಕ್ಕೆ ವಯೋವೃದ್ಧೆಯನ್ನು ನೇಮಿಸುತ್ತಾರೆ. ಅಗತ್ಯವಿದ್ದಾಗ ಮಾತ್ರ ಆಕೆ ತಾಯಿ ಮಗುವಿಗೆ ಸಹಾಯ ಮಾಡುತ್ತಾಳೆ. ಕಾಡುಗಳಲ್ಲಿ ವಾಸವಾಗಿದ್ದ ಬುಡಕಟ್ಟು ಜನಾಂಗಗಳು ತಾಯಿ ಮಗುವಿಗಾಗಿಯೇ ಪ್ರತ್ಯೇಕ ಗುಡಿಸಲು ನಿರ್ಮಿಸಿ ಅವಳ ಯೋಗ ಕ್ಷೇಮ, ಆರೋಗ್ಯ, ನಂಜಾಗದೇ ಇರಲಿ ಮತ್ತು ತಾಯಿಗೆ ತನ್ನದೇ ಆದ ಹೊಸ ಚೈತನ್ಯ ಬರಲಿ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವಂತಾಗಲಿ ಅಲ್ಲದೇ ಪ್ರಕೃತಿ ನಡುವೆ ಇರುವ ಇವರಿಗೆ ಪ್ರಕೃತಿಯ ಶಕ್ತಿಯೇ ಪ್ರಧಾನ ಹಾಗಾಗಿ ಈ ಕ್ರಿಯೆ ಅವರಿಗೆ ಸಹಜವಾದುದ್ದು. ಇನ್ನು ಹೆರಿಗೆಯನ್ನು ನುರಿತ ಸೂಲಗಿತ್ತಿ ಮಾಡುತ್ತಾಳೆ. ನುರಿತ ಹೆರಿಗೆ ತಜ್ಞ ವೈದ್ಯರೂ ಆಶ್ಚರ್ಯ ಪಡುವ ರೀತಿಯಲ್ಲಿ ಸಹಜ ಹೆರಿಗೆಯನ್ನು ಸೂಲಗಿತ್ತಿ ನಿರ್ವಹಿಸುತ್ತಾಳೆ. ಹೆರಿಗೆ ನಂತರ ಮಗುವಿಗೆ ಕಾಮಕಸ್ತೂರಿ, ಗೋರೋಜನ, (ಆರ್ಯುವೇದ ಮಾತ್ರೆ) ಕತ್ತೆ ಹಾಲು ಮಿಶ್ರಮಾಡಿ ಕುಡಿಸುತ್ತಾಳೆ. ಮೂರನೇ ದಿನದಲ್ಲಿ ಎಲೆರೆ ಚಕ್ಕ, ಬೇವಿನ ಕುಡಿ, ಕಾಮ ಕಸ್ತೂರಿ, ಅರಳೆ ಕಾಯಿ, ಜಾಕಾಯಿ, ಮೋಡಿ, ಇಪ್ಪಲಿ ಇವುಗಳನ್ನು ತಾಯಿ ಎದೆ ಹಾಲಿನಲ್ಲಿ ತೇದು ಮಗುವಿಗೆ ಬರಳೆ ಯಲ್ಲಿ ಕುಡಿಸುತ್ತಾರೆ. ಇದು ರೋಗ ನಿರೋಧಕ, ಏಳನೇ ದಿನದಲ್ಲಿ ಹದಿನಾಲ್ಕು ಮಿದಿಕೆ ಅನ್ನ, ಹದಿನಾಲ್ಕು ಅಡಿಕೆ, ಹದಿನಾಲ್ಕು ಹರಶಿಣ ಕೊಂಬು, ಹದಿನಾಲ್ಕು ಬೆಲ್ಲದ ತುಂಡುಗಳನ್ನು ಮೊರದಲ್ಲಿಟ್ಟು ಬಾಣಂತಿಗೆ ಕೊಡುತ್ತಾರೆ. ಇವುಗಳನ್ನು ಪೂಜಿಸಿದ ಬಾಣಂತಿ ಅಂದು ಮಜ್ಜಿಗೆ ಸಾರು ಮೆತ್ತನೆ ಅನ್ನವನ್ನು ಊಟ ಮಾಡುತ್ತಾಳೆ. ಒಂಬತ್ತನೇ ದಿನದಲ್ಲಿ ಜನಿಗೆ ಮುಟ್ಟಿಸುವ ಕಾರ್ಯ ನಡೆಯುತ್ತದೆ. ಕುರಿ ಜನಿಗೆ (ಜೆನಿಗೆ ಕುರಿಹಾಲು) ಹರಿಜನಿಗೆ (ಹರಿಯುವ ನೀರು) ಇವುಗಳನ್ನು ಹಟ್ಟಿ ಪೂಜಾರಿ ಕೈ, ಕಾಲು, ಮುಖ ತೊಳೆದು ಕಂಬಳಿ ಕೊಪ್ಪೆ ಹಾಕಿಕೊಂಡು ಒಂದೊತ್ತಿನ ಉಪವಾಸ ನೇಮದಲ್ಲಿ ಜನಿಗೆ ಪಾವಿನಲ್ಲಿ ತಂದು ಹಟ್ಟಿಯ ಉದಿಬಾಗಿಲನಿಲ್ಲಿರಿಸುತ್ತಾನೆ. ಆ ಪೂಜಾರಿಯು ಬಾಣಂತಿಯ ಕೈ, ಕಾಲು, ಮುಖ ತೊಳಿಸಿ 'ಮುಟ್ಟು ಜನಿಗೆ' ಎಂದು ಜನಿಗೆ ಕುರಿ ಹಾಲನ್ನು ಮುಟ್ಟಿಸುತ್ತಾನೆ. ಇದನ್ನು ಹಟ್ಟಿಯ ಉದಿಬಾಗಿಲಿನ ಹೊರಗೆ ಮುಟ್ಟಿಸುವುದರಿಂದ 'ಹೊರಜಿನಿಗೆ' ಎಂದೂ ಕರೆಯುತ್ತಾರೆ. ಮುಟ್ಟು ಜನಿಗೆ ನಂತರ 'ಕುಡಿ ಜನಿಗೆ' ಅಂಗೈಯಲ್ಲಿ ಹಾಲನ್ನು ಹಾಕಿಸಿ ಬಾಣಂತಿ ಅದನ್ನು ಕುಡಿಯುತ್ತಾಳೆ. ಮಗುವಿಗೂ ಒಂದು ಹನಿ ಹಾಕುತ್ತಾರೆ. ಇದನ್ನು ದೇವರ ಗುಬ್ಬ(ಗುಡಿ) ಯ ಮುಂದೆಯೂ ಮಾಡುವುದರಿಂದ 'ಒಳಜನಿಗೆ' ಎಂದೂ ಕರೆಯುತ್ತಾರೆ.

ಕಾಡುಗೊಲ್ಲರು ಜನ್ನಿಗೆ ಕುರಿಯನ್ನು ಆರಿಸುವಾಗ ಕೆಲವು ಕ್ರಮಗಳಿವೆ. ಕುರಿ ರೂಪ್ಪದಲ್ಲಿರುವ ಕುರಿಗಳಲ್ಲಿ ಯಾವುದನ್ನು ಜನ್ನಿಗೆ ಬಿಡಬೇಕು ಎಂದು ದೇವರನ್ನು ಶಾಸ್ತ್ರ ಕೇಳುತ್ತಾರೆ. ದೇವರು ಹೂವಿನ ಪ್ರಸಾದದ ಮೂಲಕವಾಗಲಿ ಗಣೆಯ ಮೂಲಕವಾಗಲಿ ಯಾವ ಕುರಿಯನ್ನು ಸೂಚಿಸುವುದೋ ಅದನ್ನೇ ಜನ್ನಿಗೆ ಕುರಿಯನ್ನಾಗಿ ಆರಿಸುತ್ತಾರೆ".

ಜನ್ನಿಗೆ ಕುರಿಯನ್ನು ಆರಿಸಿ ಬಿಟ್ಟ ನಂತರ ಅದರ ಬಲ ಕಿವಿಯನ್ನು ಒಂದು ಸೀಳು ಅಥವಾ ಮೂರು ಸೀಳು ಕೂಯ್ಯುತ್ತಾರೆ. (ವ್ಯಾಪಾರದ ಸಂದರ್ಭದಲ್ಲಿ ಇದನ್ನು ಗಡುಬು ಹಾಕುವುದು ಎನ್ನುತ್ತಾರೆ) ಇದು ಸಾವಿರಾರು ಕುರಿಗಳಿದ್ದರೂ ಇದನ್ನು ಗುರುತಿಸಲು ಸಹಾಯವಾಗಲಿ ಎಂದು ಹೀಗೆ ಮಾಡಿರಬಹುದು.

ಜೆನಿಗೆ ಹಾಲು ಬೇಕಾದಾಗ ಅದಕ್ಕಾಗಿ ಪಾವಿತ್ರತೆಯಿಂದ ಮಾಡಿಸಿದ 'ಜೆನಿಗೆ ಪಾವು' ತೆಗೆದುಕೊಂಡು ಕೈ, ಕಾಲು, ಮುಖ ತೊಳೆದು ಬಾಯಿಗೆ ಬಟ್ಟೆ ಕಟ್ಟಿಕೊಂಡು ಕಂಬಳಿ ಕೊಪ್ಪಳೆ ಹಾಕಿಕೊಂಡು ಮೀಸಲು ನೀರಿನಲ್ಲಿ ಕುರಿಯ ಕೆಚ್ಚಲು ತೊಳೆದು ನೀರು ಹಿಡಿಯದೇ ಹಾಲು ಕರೆದು ತರುತ್ತಾರೆ. ಹಾಲು ಸಿಗದ ಸಂದರ್ಭಗಳಿದ್ದಾಗ ತುಳಸಿ ಪತ್ರದಲ್ಲಿ ಮೀಸಲು ನೀರನ್ನು ತಾಯಿ, ಮಗುವಿಗೆ ಇದೇ ರೀತಿ ಮುಟ್ಟಿಸಿ ಕುಡಿಸಿ ಹಟ್ಟಿ ಅಥವಾ ಮನೆಯನ್ನು ಪ್ರವೇಶ ಮಾಡಿಸುತ್ತಾರೆ.

ಮೊದಲು ಇವರಲ್ಲಿ "ಗೋಜನಿಗೆ" ಇದ್ದಂತೆ ಕಾಣುತ್ತದೆ. ಗೋವಿನ ನೇಮ ಮಾಡಲು ಆಗದೇ ಗೋವುಗಳು ಸರಿಯಾದ ಸಮಯಕ್ಕೆ ದೊರೆಯದೇ, ಪಶುಪಾಲನೆಯಿಂದ ಕುರಿ ಸಾಗಾಣಿಕೆಗೆ ಕಾಡುಗೊಲ್ಲರು ಪರಿವರ್ತನೆಗೊಂಡ ಕಾರಣದಿಂದ ಕುರಿ ಜನಿಗೆ ಜಾರಿಗೆ ಬಂದಿರಬೇಕು.

ಪಶುಪಾಲಕ ಎತ್ತಪ್ಪನ ಕಾಲದಲ್ಲಿ ಗೋವುಗಳನ್ನು ಮಾತ್ರ ಬಳಸುತ್ತಿದ್ದರು ಎಂಬುದಕ್ಕ ಈ ಕೆಳಗಿನ ಪದ್ಯದ ಸಾಲುಗಳು ಸಾಕ್ಷಿಯಾಗಿವೆ.

***"ಆವು ನಿಮ್ಮಜನ್ನಿಗೆ ಗೋವು ನಿಮ್ಮ ಜನ್ನಿಗೆ***
***ಆಡ ಮಕ್ಕಳ ಇಸಬಾಯಿ.....***
***ಸ್ವಾಮಿ ಎತ್ತಯ್ನ ನೆನದೇನು"***

ಈ ಎಲ್ಲಾ ಪದ್ಧತಿಗಳು ಕಾಡುಗೊಲ್ಲರ ಮಗುವಿನ ಜನನ ಸಂದರ್ಭದಲ್ಲಿ ಆಚರಣೆಯಲ್ಲಿವೆ. ಈ ಆಚರಣೆಗಳು ಬುಡಕಟ್ಟು ಲಕ್ಷಣಗಳನ್ನು ಸ್ಪಷ್ಟವಾಗಿ ನಮೂದಿಸುತ್ತವೆ.

ಮನುಷ್ಯ ಜೀವನದ ಪ್ರಮುಖ ಘಟ್ಟ ಯೌವನ ಅಂತಹ ಯೌವ್ವನೋದಯದ ಸನ್ನಿವೇಶದಲ್ಲಿ ಋತುಮತಿಯಾಗುವುದು ಹೆಣ್ಣಿನಲ್ಲಿರುವ ಪ್ರಕೃತಿಯ ಒಂದು ವಿಶೇಷವಾದ ವರವೆಂದೇ ಭಾವಿಸಬಹುದು. ಒಂದು ಹೆಣ್ಣು ಮರುಸೃಷ್ಟಿಸುವ ಶಕ್ತಿಯನ್ನು ಪಡೆದಿದ್ದಾರೆ. ಋತುಮತಿಯಾಗುವುದು ಹೆಣ್ಣಿನ ಫಲವತ್ತತೆಯ ಸಹಜವಾದ ಗುಣ. ಆದರೆ ಹೆಣ್ಣಿನ ಈ ರಜಸ್ವಾಲೆಯನ್ನು ಕೆಲವು ಸಮುದಾಯಗಳಲ್ಲಿ ಅದನ್ನು ಸೂತಕವೆಂದು ಆಚರಿಸುವುದನ್ನು ತಿಳಿಯಬಹುದಾಗಿದೆ. ಅದರಲ್ಲೂ ವಿಶೇಷವಾಗಿ ಕಾಡುಗೊಲ್ಲ ಸಮುದಾಯವು ಈ ಆಚರಣೆಯನ್ನು ಬಹಳ ಹಿಂದಿನಿಂದಲೂ ಸೂತಕವೆಂದೆ ಪರಿಗಣಿಸಿಕೊಂಡು ಪ್ರತಿ ತಿಂಗಳು ಹೆಣ್ಣು ಋತುಮತಿಯಾದಾಗ ಸೂತಕವೆಂದು ಹಟ್ಟಿಯಿಂದ ಹೊರಗಿಡುವುದನ್ನು ಗಮನಿಸಬಹುದು.

ಆಧುನಿಕ ಸೌಲಭ್ಯವಿಲ್ಲದ ಆ ಕಾಲದಲ್ಲಿ ಈ ಆಚರಣೆಯು ಸರಿಯಿರಬಹುದು. ಏಕೆಂದರೆ ಹೆಣ್ಣು ಋತುಮತಿಯಾದಾಗ ಅಧಿಕ ರಕ್ತಸ್ರಾವದಿಂದ ಹೆಣ್ಣು ನಿಶ್ಯಕ್ತಿಯನ್ನು ಹೊಂದಿರುತ್ತಾಳೆ. ಆ ಸಮಯದಲ್ಲಿ ಹೆಣ್ಣಿಗೆ ವಿಶ್ರಾಂತಿಯ ಅವಶ್ಯಕತೆಯಿರುತ್ತದೆ. ಹಾಗಾಗಿ ಹೆಣ್ಣು ಮನೆಯೊಳಗಿದ್ದರೆ ವಿಶ್ರಾಂತಿಯು ಸಿಗುವುದಿಲ್ಲ. ಆದ್ದರಿಂದ ಸೂತಕವೆನ್ನುವ ನೆಪದಲ್ಲಿ ಹೆಣ್ಣಿಗೆ ವಿಶ್ರಾಂತಿಯನ್ನು ನೀಡುವುದಕ್ಕಾಗಿ ಈ ಆಚರಣೆಯನ್ನು ತಂದಿರಬಹುದು. ಆದರೆ ವೈಜ್ಞಾನಿಕವಾದ ಈ ಇಪ್ಪತ್ತೊಂದನೆ ಶತಮಾನದಲ್ಲೂ ಈ ಸೂತಕವನ್ನು ಆಚರಿಸುತ್ತಿರುವುದು ಪ್ರಸ್ತುತ ದಿನಗಳಲ್ಲಿ ಸರಿಯಲ್ಲ. ಈ ಆಚರಣೆಯ ಬಗ್ಗೆ ಸರ್ಕಾರ ಸಂಘ ಸಂಸ್ಥೆಗಳು ಮತ್ತು ಆ ಸಮುದಾಯದ ಶಿಕ್ಷಿತರು ಈ ಆಚರಣೆಯ ಬಗ್ಗೆ ಜಾಗೃತಿಯನ್ನು ಮೂಡಿಸಿದಾಗ ಕೆಲವು

ಹಟ್ಟಿಗಳಲ್ಲಿ ಈ ಆಚರಣೆಗಳನ್ನು ಕೈ ಬಿಟ್ಟಿದ್ದಾರೆ. ಇನ್ನೂ ಹೆಚ್ಚಿನ ಅರಿವನ್ನು ಮೂಡಿಸಿದಾಗ ಈ ಆಚರಣೆಯು ಕೊನೆಯಾಗಬಹುದು.

**ಉಪಸಂಹಾರ**

ಒಟ್ಟಾರೆಯಾಗಿ ಬುಡಕಟ್ಟು ಸಮುದಾಯಗಳಲ್ಲಿ ಮಾತ್ರವಲ್ಲದೇ ಎಲ್ಲಾ ಸಮುದಾಯಗಳಲ್ಲೂ ಕೂಡ ಸೂತಕ ಆಚರಣೆ ಕಂಡು ಬಂದರೂ ಕೂಡ ಈ ಸಮುದಾಯಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ. ಇಂತಹ ಆಚರಣೆಗಳಿಂದ ಕೆಲವು ಉಪಯೋಗಗಳಿದ್ದರೂ ಕೂಡ ಇಂದಿನ ಆಧುನಿಕ ಯುಗದಲ್ಲಿ ಅಮಾನುಷವಾದುದಾಗಿದೆ, ಹಾಗಾಗಿ ಇಂತಹ ಆಚರಣೆಗಳ ಬಗ್ಗೆ ಅರಿವು ಮೂಡಿಸಬೇಕಾದುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಶಂಕರನಾರಾಯಣ ತೀ.ನಂ. (1982). ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ಸಂಬಿಕೆಗಳು. ಪ್ರಸಾರಾಂಗ ಮೈಸುರು ವಿಶ್ವವಿದ್ಯಾಲಯ, ಮೈಸೂರು.
- ಮೀರಾಸಾಬಿಹಳ್ಳಿ ಶೀವಣ್ಣ. (2005). ಕಾಡುಗೊಲ್ಲರ ಬುಡಕಟ್ಟು ವೀರರು. ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
- ಗುರುಲಿಂಗಯ್ಯ ಎಂ. ಮತ್ತು ನಾಗಪ್ಪ ವಿ. (2008). ಕಾಡುಗೊಲ್ಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಗುರುಲಿಂಗಯ್ಯ ಎಂ. (2005). ಕರ್ನಾಟಕದ ಗೊಲ್ಲ ಸಮುದಾಯ: ಸಮಾಜೋ–ಸಾಂಸ್ಕೃತಿಕ ಅಧ್ಯಯನ. ಶಕ್ತಿ ಪ್ರಕಾಶನ, ಬೆಂಗಳೂರು.
- ಮೀರಾಸಾಬಿಹಳ್ಳಿ ಶಿವಣ್ಣ. (1999). ಗೊಲ್ಲ ಕಡಗ. ಸಿ.ವಿ.ಜಿ. ಪಬ್ಲಿಕೆಷನ್, ಬೆಂಗಳೂರು.
- ಶಂಕರನಾರಾಯಣ ತೀ.ನಂ ಮತ್ತು ವೆಂಕಟೇಶ ಎಂ.ಎನ್. (ಸಂ.). (2014). *ಜುಂಜಪ್ಪ ಮಹಾಕಾವ್ಯ*. ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ.
- ಸಿದ್ದಗಂಗಯ್ಯ ಜಿ.ಬಿ. (1996). *ಜುಂಜಪ್ಪನ ಕಾವ್ಯ*. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.